

**ಪ್ರಹ್ಲಾದ ಡಿ.ಎಂ.**
ಕಲೆ: ರೂಪಶ್ರೀ ಕಲ್ಲಿಗನೂರು

# ದುರ್ಗವ್ವನ ಚರಗ

ಅದೊಂದು ಇಳಿಸಂಜೆಯ ಹೊತ್ತಲ್ಲಿ ಹೊಲಗೇರಿಯ ಸಂಕವ್ವ ಗೌಡರ ಹೊಲದಲ್ಲಿ ಕೂಲಿ ಕೆಲಸ ಮಾಡಿ, ಮನೆಗೆ ಮರುಳುವಾಗ ಅವಳ ಒಂದು ಕೈಯಲ್ಲಿ ತನ್ನ ಜೀವನದ ದಾರಿ ಸಾಗಿಸುವ ಹರಿದು ಹೋಗಿರುವ ಎಕ್ಕಡಗಳು, ಮತ್ತೊಂದು ಕೈಯಲ್ಲಿ ತನ್ನ ಜೀವನದ ಜೊತೆಗಾತಿ ಮೇಕೆ ಮರಿಯನ್ನು ಹಿಡಕೊಂಡು, ತಲೆಮೇವಿಗಂತ ಆ ಮೇಕೆ ಮೇಯಲು ಬೇವಿನ ಸೊಪ್ಪನ್ನು ಹೊತ್ತು, ನಾಲ್ಕಾರು ಹೆಜ್ಜೆ ಹಾಕುತ್ತ ತನ್ನ ಮನೆಗೆ ನಡೆದಳು. ಗಂಡ ಇದ್ದರೂ ಕುಡಿದು ಸರುವೊತ್ತಿನಲ್ಲಿ ಬರುತ್ತಿದ್ದನು. ಆಗ ಕಳ್ಳರು ಊರೂರು ತಿರುಗುತ್ತಾರೆ ಎಂದು ಸುದ್ದಿ ಹಬ್ಬಿದ್ದಕ್ಕೆ, ಅವಳ ರಕ್ಷಣೆಗೆಂದು ಕಿಂದರಿಯೆನ್ನುವ ನಾಯಿಯನ್ನು ಮಗಿಗಿನ್ನ ಹೆಚ್ಚು ಎಂಬಂತೆ ಸಾಕಿದ್ದಳು. ಒಂದು ಹರಕಲು ಮುರುಕಲು ಗುಡಿಸಲಲ್ಲಿ ಬಂಧುಬಳಗದವರೆಲ್ಲಾರಿದ್ದು, ಯಾರ ಉಸಾಬರಿ ನನಗ್ಯಾಕೆ ಎಂದು ಹಿಟ್ಟು ಬೇಯಿಸಿಕೊಂಡು ಮುಂಜಾನೆ ಮನೆ ಬಿಟ್ಟೋಳು ಮತ್ತೆ ಮನಿ ಸೇರೋದೆ ಜ್ಯೋತ್ಯಮಂದಿರು ಮಾತಾಡೋ ಹೊತ್ತಿಗೆ. ಎಲ್ಲರಿದ್ದು ಅನಾಥಳಾಗಿ ಜೀವನ ನಡೆಸುತ್ತಿದ್ದಳು. ಈ ಬದುಕೇ ಸಂಕವ್ವನ ದಿನಚರಿ.

ಇವಳು ಸವೆಸಿದ ಬಾಲ್ಯದ ಬದುಕು, ಮುದ್ದೇಪುರ ಎಂಬುವ ಪುಟ್ಟ ಹಳ್ಳಿ. ಅದು ನೋಡಲು ನಿಸರ್ಗವೇ ಭೂಮಿಗೆ ಇಳಿದು ಬಂದಿದೆ ಎನ್ನುವಂತೆ, ಆ ಹಳ್ಳಿಯ ಸುತ್ತಲೂ ಹತ್ತಾರು ತೋಟಗಳಲ್ಲಿ ತೆಂಗಿನ ಮರಗಳು ತಲೆಯೆತ್ತಿ ನಿಂತಿವೆ. ಅಲ್ಲಿನ ಜನರು ಸಹ ರಟ್ಟೆ ತುಂಬಾ ಕ್ಯಾಮೆ ಮಾಡಿ ರಾತ್ರಿಗೆ ಸೂರಕ್ಕನ ಸೇಂದಿ ಅಂಗಡಿಗೆ ದುಡಿದೊಪ್ಪತ್ತಿನ ರೊಕ್ಕಾ ಅವಳ ಸೆರಗಿಗೆ ಚೆಲ್ಲುತ್ತಾರೆ. ಅವರೆಲ್ಲರಿಗೂ ಸೇಂದಿ ಅಮಲು, ಇವಳಿಗೆ ಗಂಟು ಕಟ್ಟಿಕೊಳ್ಳಲು ರೊಕ್ಕದ ಅಮಲು. ಇದು ಮುದ್ದೇಪುರ ಜನರ ಬದುಕು. ಈ ಹಳ್ಳಿಯಲ್ಲಿ ಬೆಳೆದ ಸಂಕವ್ವ ಚಿಕ್ಕಂದಿನಲ್ಲೇ